## ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಮುದ್ದೇಬಿಹಾಳ

ಖಾಸಗಿ ಪಿರ್ಯಾದಿ ನಂ- 7/2021

ಚಾಸಾಃ 2

| | | |
|---|---|---|
| ಹೆಸರು | : | ತಿಪ್ಪಣ್ಣ ತಂದೆ ಲಕ್ಷ್ಮಣ ದಂಡಿನ |
| ವಯಸ್ಸು | : | 72 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಕಮಲದಿನ್ನಿ, ತಾ. ಲಿಂಗಸೂರ |

ದಿನಾಂಕಃ 28.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಸಾಕ್ಷಿಯ ಪ್ರಮಾಣಿಕೃತ ಹೇಳಿಕೆ

ದಿ. 30.10.2021 ರಂದು ನಾಲತವಾಡದ ವೀರೇಶ್ವರ ಸರ್ಕಲ್ ಹತ್ತಿರ ಫಿರ್ಯಾದಿ ಮತ್ತು ಆತನ ಹೆಂಡತಿ ಸಂತೆಗೆ ಬಂದಿದ್ದರು. ಸುಮಾರು ಸಂಜೆ 3-30 ರಿಂದ 4-00 ಗಂಟೆ ಸುಮಾರಿಗೆ ಆರೋಪಿ ದ್ವಿಚಕ್ರ ವಾಹನದ ಮೇಲೆ ಬಂದು ಫಿರ್ಯಾದಿದಾರರಿಗೆ ಹಾಯಿಸಿದ್ದರಿಂದ ಅವರು ಬಿದ್ದರು. ಆರೋಪಿ ಫಿರ್ಯಾದಿದಾರರಿಗೆ ಕೈಯಿಂದ ಮುಷ್ಟಿ ಮಾಡಿ ಗುದ್ದಿರುತ್ತಾನೆ. ಆರೋಪಿ 10 ಕಿಲೊ ಭಾರದ ಕಲ್ಲನ್ನು ತೆಗೆದುಕೊಂಡು ಫಿರ್ಯಾದಿದಾರರ ಮೇಲೆ ಎತ್ತಿ ಹಾಕಲು ಹೋದರು. ಆ ಸಮಯದಲ್ಲಿ ನಾನು ಮತ್ತು ಫಿರ್ಯಾದಿದಾರರ ಹೆಂಡತಿ ಜಗಳವನ್ನು ಬಿಡಿಸಿರುತ್ತೇವೆ. ನಂತರ ಫಿರ್ಯಾದಿ ಮತ್ತು ಆತನ ಹೆಂಡತಿಯನ್ನು

ಬಸ್ಸಿನಲ್ಲಿ ಲಿಂಗಸಗೂರಿಗೆ ಕಳುಹಿಸಿ ಕೊಟ್ಟಿರುತ್ತೇನೆ. ದಿ. 31.10.2021 ರಂದು ಫಿರ್ಯಾದಿದಾರ ವಿಜಯಪೂರದ ಆಸ್ಪತ್ರೆಗೆ ಹೋಗಿರುತ್ತಾರೆ.

(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ನನ್ನ ಸಮಕ್ಷಮ,

ಓ.ಹೇ.ಕೇ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಮುದ್ದೇಬಿಹಾಳ